# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ

**SESSIONS CASE: 60/2020**

**ಪ್ರಾ.ಸಾ. 19**
**ದೋ.ಸಾ. 35**

**ದಿನಾಂಕ 03.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ-

21). ದಿ.14.01.2020 ರಂದು ತನಿಖೆಯನ್ನು ಮುಂದುವರೆಸಿ ನಮ್ಮ ವಶದಲ್ಲಿದ್ದ ಆರೋಪಿ ವೆಂಕಟೇಶ್ ರವರ ಮಾದರಿ ಧ್ವನಿಯನ್ನು ಮುಂದಿನ ತನಿಖೆಗಾಗಿ ಸಂಗ್ರಹಿಸುವ ಸಲುವಾಗಿ ಪಂಚರಾದ ಪ್ರಾಸಾ -9 ಅರುಣಕುಮಾರ ಮತ್ತು ಚಾಸಾ-19 ಶ್ರೀನಿವಾಸ್ ರವರನ್ನು ಕಚೇರಿಗೆ ಕರೆಯಿಸಿಕೊಂಡು ಪ್ರಕರಣದ ಸಾರಾಂಶವನ್ನು ತಿಳಿಸಿ ಸಾಕ್ಷಿದಾರರಾಗಿ ಸಹಕರಿಸಿಬೇಕೆಂದು ಕೇಳಿಕೊಂಡಿರುತ್ತೇನೆ. ಸಾಕ್ಷಿದಾರರಿಗೆ ತೆಲುಗು ಹಾಗೂ ಕನ್ನಡ ಭಾಷೆಗಳ ಬಗ್ಗೆ ಗೊತ್ತಿರುವ ಬಗ್ಗೆ ಖಚಿತಪಡಿಸಿಕೊಂಡಿರುತ್ತೇನೆ. ಆರೋಪಿಯಿಂದ ಜಪ್ತು ಪಡಿಸಿರುವ ಮೊಬೈಲ್ ನಲ್ಲಿ ದಾಖಲಾಗಿದ್ದ ಸಂಭಾಷಣೆಯಲ್ಲಿ ಆರೋಪಿಯ ಮತ್ತು ಮೃತ ರಾಧಾ ರವರ ಧ್ವನಿಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಆರೋಪಿ ಗ್ರಾಮದ ನಿವಾಸಿಗಳಾದ ಮತ್ತು ಆತನ ಧ್ವನಿಯನ್ನು ಬಲ್ಲವರಾದ ಚಾಸಾ-20 ಶ್ರೀಮತಿ ಸುಮಂಗಲಾ ಮತ್ತು ಚಾಸಾ-21 ಶಿವಶಂಕರ್ ರವರನ್ನು ಕಚೇರಿಗೆ ಬರಮಾಡಿಕೊಂಡಿರುತ್ತೇನೆ.

22). ನಂತರ ಆರೋಪಿಯ ಮೊಬೈಲ್ ನಲ್ಲಿ ದಾಖಲಾಗಿದ್ದ ಸಂಭಾಷಣೆಯನ್ನು ಕಂಪ್ಯೂಟರ್ ಮೂಲಕ ಕೇಳಿಸಲಾಗಿ, ಸದರಿ ಸಂಭಾಷಣೆಯನ್ನು ಕೇಳಿದ ನಂತರ ಚಾಸಾ - 20 ಮತ್ತು 21 ರವರು ಸದರಿ ಸಂಭಾಷಣೆಯು ಆರೋಪಿ ಹಾಗೂ ಮೃತೆ ರಾಧಾ ರವರ ನುಡವೆ ನಡೆದ ಮಾತುಕತೆಯನ್ನು ಗುರುತಿಸಿರುತ್ತಾರೆ. ಆರೋಪಿಯ ವೊಬೈಲ್ ಅನ್ನು ವಶಪಡಿಸಿಕೊಳ್ಳುವ ಸಮಯದಲ್ಲಿ ಸದರಿ ಮೊಬೈಲ್ ನಲ್ಲಿ ಕನ್ನಡ ಹಾಗೂ ತೆಲುಗು ಮಿಶ್ರಿತ ಸಂಭಾಷಣೆಗಳಿದ್ದು, ಆಯ್ದು ಕೆಲವು ಸಂಭಾಷಣೆಗಳನ್ನು ಕನ್ನಡ ಭಾಷೆಯಲ್ಲಿ ಬೆರಳಚ್ಚು ಮಾಡಿಸಿ ಲಿಪಿಯನ್ನು ತಯಾರಿಸಿರುತ್ತೇನೆ.

23). ನಮ್ಮ ಸಿಬ್ಬಂದಿ ಚಾಸಾ- 33 ಕಲಂದರ್ ರವರ ಮೊಬೈಲ್ ನಲ್ಲಿ voice recorder ಅಪ್ಲಿಕೇಷನ್ ಅನ್ನು download ಮಾಡಿಸಿ 8 ಜಿ.ಬಿ.ಯ san disc memory card ಅನ್ನು ಅಳವಡಿಸಿ ಮತ್ತು ಅದು ಖಾಲಿ ಇರುವುದನ್ನು ಖಚಿತಪಡಿಸಿಕೊಂಡು, ಮೊಬೈಲ್ ಅನ್ನು ಫ್ಲೈಟ್ ಮೋಡ್ ಗೆ ತಂದು, ಬ್ಯಾಟರಿ ಸುಸ್ಥಿಯಲ್ಲಿರುವುದನ್ನು ಖಚಿತ ಪಡಿಸಿಕೊಂಡು, ಸಂಭಾಷಣೆಯ ಲಿಪಿಯನ್ನು ಆರೋಪಿಯಿಂದ 6 ಬಾರಿ ಓದಿಸಿ, ಆತ ಓದುವುದನ್ನು ಮೊಬೈಲ್ ನಲ್ಲಿ ರೆಕಾರ್ಡ ಮಾಡಿಕೊಳ್ಳುವ ಮೂಲಕ ಆತನ ಮಾದರಿ ಧ್ವನಿಯನ್ನು ಪಂಚರ ಸಮಕ್ಷಮ ಸಂಗ್ರಹಿಸಿರುತ್ತೇನೆ. ಈ ಬಗ್ಗೆ ವಿವರವಾದ ಪಂಚನಾಮೆಯನ್ನು ತಯಾರಿಸಿರುತ್ತೇನೆ. ಸದರಿ ಮಾದರಿ ಧ್ವನಿಯು 8.10mb ಯಲ್ಲಿ ದಾಖಲಾಗಿರುತ್ತದೆ. ನಂತರ ಸದರಿ ದಾಖಲಾದ ಮಾದರಿ ಧ್ವನಿಯನ್ನು ಎರಡು ಖಾಲಿ ಡಿ.ವಿ.ಡಿ ಗಳಿಗೆ ಕಚೇರಿಯ ಕಂಪ್ಯೂಟರ್ ಮೂಲಕ ವರ್ಗಾಯಿಸಿ, ಅದನ್ನು 2020-01-14-12-20-21 ಎಂ.ಪಿ.3 ಎಂಬ ಪೈಲಿಗೆ ಯಾವುದೇ ಲೋಪ ಬಾರದಂತೆ ಸಂಗ್ರಹಿಸಿ ಸೇವ್ ಮಾಡಲಾಗಿರುತ್ತದೆ. ಒಂದು ಡಿ.ವಿ.ಡಿ ಹಾಗೂ san disc memory card ಪ್ರತ್ಯೇಕವಾದ ಕವರ್ ನಲ್ಲಿ ಇಟ್ಟು "D" ಎಂಬ ಅಕ್ಷರದಿಂದ ಸೀಲ್ ಮಾಡಿ ಸೀಜ್ ಮಾಡಿ ಮುಂದಿನ ಕ್ರಮಕ್ಕಾಗಿ ವಶಕ್ಕೆ ಪಡೆದಿರುತ್ತೇನೆ. ಮತ್ತೊಂದು ಡಿ.ವಿ.ಡಿ ಯನ್ನು ಮುಂದಿನ ತನಿಖೆಗಾಗಿ ನನ್ನ ವಶದಲ್ಲಿ ಇಟ್ಟುಕೊಂಡಿರುತ್ತೇನೆ. ಸದರಿ ಮಹಜರ್ ಅನ್ನು ಬೆಃ11.30 ರಿಂದ ಮಃ1.00 ಗಂಟೆಯವರೆಗೆ ಜರುಗಿಸಲಾಗಿರುತ್ತದೆ. ಸದರಿ ಪಂಚನಾಮೆಗೆ ಧ್ವನಿ ಗುರುತಿಸಿದವರು, ಆರೋಪಿ, ಪಂಚರ ಹಾಗೂ ನಾನು ಸಹಿಗಳನ್ನು ಮಾಡಿರುತ್ತೇವೆ. ಸಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-17 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-17(ಬಿ) ಎಂದು, ಆರೋಪಿಯ ಸಹಿಯನ್ನು ನಿಪಿ-17(ಸಿ) ಎಂದು ಗುರುತಿಸಲಾಯಿತು.

24). ಅಮಾನತ್ತು ಪಡಿಸಿದ ಮಾಲುಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 12/2020 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ಮುದ್ದೆ ಮಾಲುಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಒಂದು ಡಿ.ವಿ.ಡಿ. ಹಾಗೂ san disc memory card ಅನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ .2 ಮತ್ತು 3 ಎಂದು ಗುರುತಿಸಲಾಗಿರುತ್ತದೆ. ಪಂಚನಾಮೆಯ ಕಾಲಕ್ಕೆ ಫೋಟೋಗಳನ್ನು ಹೆಚ್.ಸಿ-158 ಕಲಂದರ್ ತೆಗೆದಿರುತ್ತಾರೆ.

ಅದೇ ದಿನ ಆರೋಪಿಯನ್ನು ರಿಮ್ಯಾಂಡ್ ಅರ್ಜಿಯೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಹಾಗೂ ಪಂಚರ ಹಾಗೂ ಸಿಬ್ಬಂದಿಗಳ ಹೇಳಿಕೆಗಳನ್ನು ದಾಖಲಿಸಿರುತ್ತೇನೆ. ಪ್ರಾಸಾ-3 ಹಾಗೂ ಪ್ರಾಸಾ-9 ರವರಿಂದ ಕಲಂ 65(ಬಿ) ಸರ್ಟಿಫಿಕೇಟ್ ಗಳನ್ನು ನೋಡಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಪಿ-32 ಎಂದು ಗುರುತಿಸಲಾಯಿತು. ಪಂಚನಾಮೆಯ ಕಾಲಕ್ಕೆ ತೆಗೆದ ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-10 ಎಂದು ಗುರುತಿಸಲಾಗಿದೆ.

24). ದಿ.16.01.2020 ರಂದು ತನಿಖೆಯನ್ನು ಮುಂದುವರೆಸಿ ಆರೋಪಿಯು ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ಹೇಳಿದಂತೆ ಅಂದರೆ ಆರೋಪಿ ದಿನಾಂಕ 06.01.2020 ರಂದು ರಾತ್ರಿ ತನ್ನ ತಮ್ಮನಾದ ಪುರುಶೋತ್ತಮನಿಂದ ಇಲಿ ಪಾಷಾಣವನ್ನು ತರಿಸಿಕೊಂಡು ತಾನು ಇಲಿ ಪಾಷಾಣವನ್ನು ತನ್ನ ಮುಖಕ್ಕೆ ಒರಸಿಕೊಂಡು ತಿಂದಂತೆ ನಟಿಸಿದ್ದು ಈ ಬಗ್ಗೆ ಇಲಿ ಪಾಷಾಣವನ್ನು ತಂದ ಅಂಗಡಿಯಿಂದ ಪುರುಶೋತ್ತಮ್ಮನ ಮೂಲಕ ಮಹಜರ್ ಜರುಗಿಸುವ ಸಲುವಾಗಿ ಪುರಶೋತ್ತಮನನ್ನು ಠಾಣೆಗೆ ಕರೆಸಿಕೊಂಡಿರುತ್ತೇನೆ. ನಂತರ ಪಂಚನಾಮೆಯ ಕಾಲಕ್ಕೆ ಪಂಚರಾಗಿ ಸಹಕರಿಸಿಲು ಪ್ರಾಸಾ 11 ಮತ್ತು 12 ರವರನ್ನು ಕಚೇರಿಗೆ ಕರೆಸಿಕೊಂಡು ಪ್ರಕರಣದ ವಿದ್ಯಾಮಾನಗಳನ್ನು ತಿಳಿಸಿ ಪಂಚರಾಗಿ ಸಹಕರಿಸಿಲು ಕೋರಿಕೊಂಡಿರುತ್ತೇನೆ. ನಂತರ ಪುರಶೋತ್ತಮನನ್ನು ಇಲಿ ಪಾಷಾಣವನ್ನು ತಂದ ಅಂಗಡಿಯನ್ನು ತೋರಿಸುವಂತೆ ಹೇಳಿದ್ದು, ಆತನು ತೊಂಡಬಾವಿ ರೈಲ್ವೆ ನಿಲ್ದಾಣದಿಂದ ಮಂಚೇನಹಳ್ಳಿಗೆ ಹೋಗುವ ರಸ್ತೆಯಲ್ಲಿರುವ ಒಂದು ಅಂಗಡಿಯನ್ನು ತೋರಿಸಿದ ಮೇರೆಗೆ, ಅಂಗಡಿ ಮಾಲೀಕ ಬಾಬಾಜಾನ್ ನನ್ನು ವಿಚಾರ ಮಾಡಲಾಗಿ ಆತ ಪುರಶೋತ್ತಮನನ್ನು ಗುರುತಿಸಿ ಇಲಿ ಪಾಷಾಣವನ್ನು ದಿ.06.01.2020 ರಂದು ರಾತ್ರಿ 8.30 ಗಂಟೆ ಸಮಯದಲ್ಲಿ ಖರೀದಿಸಿರುವುದಾಗಿ ತಿಳಿಸಿದ ಮೇರೆಗೆ ಸ್ಥಳದಲ್ಲಿ ನಿಪಿ-18 ರಂತೆ ಪಂಚನಾಮೆಯನ್ನು ಬೆಃ11.00 ರಿಂದ 11.40 ಗಂಟೆಯವರೆಗೆ ಜರುಗಿಸಿ, ಪಂಚರ, ಅಂಗಡಿ ಮಾಲೀಕ, ಪುರಶೋತ್ತಮ ಹಾಗೂ ನಾನು ಮತ್ತು ನಮ್ಮ ಸಿಬ್ಬಂದಿಗಳು ಪಂಚನಾಮೆಗೆ ಸಹಿಗಳನ್ನು ಮಾಡಿರುತ್ತೇವೆ. ಸಾಕ್ಷಿಯ ಸಹಿಯನ್ನು ನಿಪಿ-18(ಇ) ಎಂದು ಗುರುತಿಸಲಾಯಿತು. ನಂತರ ಪುರಶೋತ್ತಮ, ಬಾಬಾಜಾನ್-ಪ್ರಾಸಾ.15 ಮತ್ತು ಪ್ರಾಸಾ 11 ಮತ್ತು 12 ರವರ ಹೇಳಿಕೆಗಳನ್ನು ದಾಖಲಿಸಿರುತ್ತೇನೆ.

25). ಅದೇ ದಿನ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿಕೊಡುವಂತೆ ಪಿ.ಡಬ್ಲ್ಯೂ ಇಂಜಿನಿಯರ್ ರವರಿಗೆ ಮತ್ತು ಕೃತ್ಯ ನಡೆದ ಸ್ಥಳದ ದಾಖಲಾತಿಯನ್ನು ಒದಗಿಸುವಂತೆ ಪಿ.ಡಿ.ಓ ತೊಂಡೆಬಾವಿ ಗ್ರಾಮ ಪಂಚಾಯ್ತಿ ರವರಿಗೆ ಪ್ರತ್ಯೇಕ ಪತ್ರಗಳನ್ನು ಬರೆದಿರುತ್ತೇನೆ. ಸಾಕ್ಷಿ ಸದರಿ ಪತ್ರಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-33 ಮತ್ತು ನಿಪಿ-34 ಎಂದು ಸಾಕ್ಷಿಯ ಸಹಿಯನ್ನು ನಿಪಿ 33(ಎ) ಮತ್ತು ನಿಪಿ 34(ಎ) ಎಂದು ಗುರುತಿಸಲಾಯಿತು. ಅದರಂತೆ ದಿ.20.03.2020 ರಂದು ಪಿ.ಡಬ್ಲ್ಯೂ ಇಂಜಿನಿಯರ್ ಮತ್ತು ಪಿ.ಡಿ.ಓ ರವರು ತಮ್ಮ ವರದಿಗಳೊಂದಿಗೆ ನಕ್ಷೆ ಹಾಗೂ ಖಾತೆ ನಕಲನ್ನು ಹಾಜರು ಪಡಿಸಿದ ಮೇರೆಗೆ ಅವುಗಳನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಕ್ಷೆ ಹಾಗೂ ಖಾತೆ ನಕಲನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಕ್ರಮವಾಗಿ ನಿಪಿ-5 ಹಾಗೂ ನಿಪಿ-6 ಎಂದು ಗುರುತಿಸಲಾಗಿದ್ದು, ವರದಿಗಳನ್ನು ನಿಪಿ -5(A) ಮತ್ತು ನಿಪಿ-6(A) ಎಂದು ಗುರುತಿಸಲಾಯಿತು.

26). ದಿ.20.02.2020 ರಂದು ವಿಕ್ಟೋರಿಯಾ ಆಸ್ಪತ್ರೆ ವೈದ್ಯಾಧಿಕಾರಿಗಳಿಂದ ಮೃತ ರಾಧಾಳ ಪಿ.ಎಂ ವರದಿ ಹಾಗೂ ಶವ ಪರೀಕ್ಷೆ ಕಾಲಕ್ಕೆ ಸಂಗ್ರಹಿಸಿದ ಮೃತಳ 4 ಅಂಗಾಂಗಾಳನ್ನು ಸ್ವೀಕರಿಸಿ, ಪಿ.ಎಂ. ವರದಿಯನ್ನು ಕಡತಕ್ಕೆ ಅಳವಡಿಸಿರುತ್ತೇನೆ ಹಾಗೂ ಅಂಗಾಂಗಾಳನ್ನು ಪಿ.ಎಫ್ ಸಂಖ್ಯೆ 52/2020 ರಲ್ಲಿ ನಮೂದಿಸಿ ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿ ಶವ ಪರೀಕ್ಷಾ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-7 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

27). ದಿ.23.03.2020 ರಂದು ಆರೋಪಿಯು ದಿ.06.01.2020 ರಂದು ಆಸ್ಪತ್ರೆಗೆ ದಾಖಲಾಗಿದ್ದು, ಆ ದಿನ ಆತನ ಸ್ಥಿತಿಗತಿಯ ಬಗ್ಗೆ ಮತ್ತು ಆತ ವಿಷವನ್ನು ಎಷ್ಟು ಪ್ರಮಾಣದಲ್ಲಿ ಸೇವಿಸಿದ್ದ ಎಂಬ ಬಗ್ಗೆ ವರದಿಯನ್ನು ನೀಡುವಂತೆ ಗೌರಿಬಿದನೂರಿನ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ವೈದ್ಯರಿಗೆ ಮೌಖಿಕವಾಗಿ ಕೋರಿದ್ದು, ಸದರಿಯವರು ಒಂದು ವರದಿಯನ್ನು ಅದೇ ದಿನ ನೀಡಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಕೊಂಡಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-22 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-22(ಬಿ) ಎಂದು ಗುರುತಿಸಲಾಯಿತು.

28) ದಿ.29.02.2020 ರಂದು ಸಾಕ್ಷಿದಾರರಾದ ಫ್ರಾಸಾ-6 ಹಾಗೂ 7 ರವರ ಹೇಳಿಕೆಗಳನ್ನು ದಾಖಲಿಸಿರುತ್ತೇನೆ. ದಿ.31.03.2020 ರಂದು san disc memory card ಮತ್ತು ಡಿ.ವಿ.ಡಿ ಯನ್ನು ಹಾಗೂ ವೈದ್ಯರಿಂದ ಸ್ವೀಕರಿಸಿದ ಮೃತಳ ಅಂಗಾಂಗಳನ್ನು, ಕೃತ್ಯ ನಡೆದ ಸ್ಥಳದಲ್ಲಿ ಜಪ್ತು ಪಡಿಸಿದ ಮುದ್ದೆ ಮಾಲುಗಳನ್ನು ಎಫ್.ಎಸ್.ಎಲ್ ಪರೀಕ್ಷೆಗಾಗಿ ಸಮುಚ್ಚಿತ ಮಾರ್ಗದಲ್ಲಿ ನಮ್ಮ ಠಾಣಾ ಸಿಬ್ಬಂದಿಯೊಂದಿಗೆ ಕಳುಹಿಸಿಕೊಟ್ಟಿದ್ದು, ಅವುಗಳನ್ನು ಎಫ್.ಎಸ್.ಎಲ್ ಕಚೇರಿಗೆ ಸಲ್ಲಿಸಿ ಎರಡು acknowledgment ಗಳನ್ನು ತಂದು ಹಾಜರು ಪಡಿಸಿದ್ದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಕೊಂಡಿರುತ್ತೇನೆ . ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಒಟ್ಟಾರೆಯಾಗಿ ನಿಪಿ-35 ಎಂದು ಗುರುತಿಸಿದ್ದು , ಅವುಗಳಲ್ಲಿ ಸಾಕ್ಷಿ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಅದೇ ದಿನ ತನಿಖಾ ಕಾಲದಲ್ಲಿ ತೆಗೆದ ಭಾವಚಿತ್ರಗಳನ್ನು ಹಾಗೂ ಮೃತಳ ಹಾಗೂ ಆರೋಪಿಯ ಸಿ.ಡಿ.ಆರ್ ಗಳನ್ನು ಸಂಗ್ರಹಿಸಿ ತನಿಖೆ ಪೂರೈಸಿದ ಕಾರಣ ಆರೋಪಿಯ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರವನ್ನು, ಎಫ್.ಎಸ್.ಎಲ್ ವರದಿಯನ್ನು ನಂತರ ಹಾಜರು ಪಡಿಸುವ ಕೋರಿಕೆಯ ಮೇರೆಗೆ ದಾಖಲಿಸಿರುತ್ತೇನೆ. ಸಾಕ್ಷಿ ಸಿ.ಡಿ.ಆರ್ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-36 ಎಂದು ಗುರುತಿಸಲಾಯಿತು.

29). ಫ್ರಾಸಾ-2 ರವರು ನಿಪಿ-8 ರಂತೆ , ಫ್ರಾಸಾ-3 ರವರು ನಿಪಿ-11 ರಂತೆ, ಫ್ರಾಸಾ ರವರು ನಿಪಿ-13 ರಂತೆ, ಫ್ರಾಸಾ-7 ರವರು ನಿಪಿ-14 ರಂತೆ, ಫ್ರಾಸಾ-8 ರವರು ನಿಪಿ-16 ರಂತೆ, ಫ್ರಾಸಾ-10 ರಿಂದ 12 ರವರು ನಿಪಿ-19 ರಿಂದ 21 ರಂತೆ ಫ್ರಾಸಾ-14 ಮತ್ತು 15 ರವರು ನಿಪಿ-23 ಮತ್ತು 24 ರಂತೆ , ನನ್ನ ಮುಂದೆ ಹೇಳಿಕೆ ನೀಡಿದ್ದು, ಹೇಳಿಕೆ ನೀಡಿಲ್ಲ ಎನ್ನುವುದು ಸರಿಯಲ್ಲ. ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ದಾಖಲೆ ಪ್ರಕಾರ ನನ್ನ ನಂತರದ ಠಾಣಾಧಿಕಾರಿ ಶಶಿಧರ್ ರವರು ಎಫ್.ಎಸ್.ಎಲ್ ವರದಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಕೆ.ಎಸ್.ಎನ್ ವಕೀಲರಿಂದಃ-</u>

ಆರೋಪಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಾಕ್ಷಿಯು ತಾನು ನೆಲಮಂಗಲದ ಸಂಚಾರಿ ಠಾಣೆಯಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದು, ಹೆಚ್ಚಿನ ಬಂದೋಬಸ್ತ ಕರ್ತವ್ಯಗಳು ನಮ್ಮ ಠಾಣಾ ವ್ಯಾಪ್ತಿಯಲ್ಲಿ ಬರುವ ಕಾರಣ

ಮೇಲಾಧಿಕಾರಿಗಳು ಅನುಮತಿ ನೀಡಲು ನಿರಾಕರಿಸುತ್ತಾರೆ ಎಂದು ನುಡಿದ ಮೇರೆಗೆ ಆರೋಪಿ ಪರ ವಕೀಲರು ಸಾಕ್ಷಿಯು ವಿ.ಸಿ. ಮುಖಾಂತರ ಹಾಜರಾದಲ್ಲಿ ತಾನು ಪಾಟೀ ಸವಾಲು ಮಾಡಲು ಒಪ್ಪಿದ ಮೇರೆಗೆ ಸಮಯಾವಕಾಶ  ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ/-
**(ಟಿ. ಪಿ. ರಾಮಲಿಂಗೆ ಗೌಡ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.